2016 ಕ.ತೀ.ವ 1672

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಪ್ರವೀಣ್ ಬಸವಣ್ಣೆಪ್ಪ ಶಿವಳ್ಳಿ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*

ಭಾರತ ಸಂವಿಧಾನದ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ 323, 504 ಮತ್ತು 506ನೇ ಪ್ರಕರಣ.

ಎರಡನೇ ಎದುರುದಾರರು ಅರ್ಜಿದಾರರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ ದೋಷಾರೋಪಣಾ ಪಟ್ಟಿಯನ್ನು ರದ್ದುಗೊಳಿಸುವಂತೆ ಕೋರಿ ಸದರಿ ರಿಟ್ ಅರ್ಜಿ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 155(2)ರನ್ವಯ ಅಸಂಜ್ಞೇಯ ಮೊಕದ್ದಮೆಗಳಲ್ಲಿ ಅಂತಹ ಮೊಕದ್ದಮೆಗಳನ್ನು ನಡೆಸಲು ಶಕ್ತವಿರುವ ದಂಡಾಧಿಕಾರಿಗಳ ಅನುಮತಿಯಿಲ್ಲದೆ ಯಾವುದೇ ಆರಕ್ಷಕ ಅಧಿಕಾರಿಯು ತನಿಖೆಯನ್ನು ನಡೆಸುವಂತಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ರದ್ದುಗೊಳಿಸಿದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ದಿನಾಂಕ 22.10.08ರಂದು ನಿರ್ಧರಿಸಲಾದ ದಂಡ ಪ್ರಕ್ರಿಯಾ ಸಂಹಿತೆ ಸಂ.3082/2007 ಆನಂದ್ ಸಿಂಗ್ –ವಿರುದ್ಧ– ಕರ್ನಾಟಕ ರಾಜ್ಯ* | *(ಉಲ್ಲೇ) 12* |

*ರಿಟ್ ಅರ್ಜಿ ಸಂಖ್ಯೆ 102248/2016 (ಜಿಎಂ–ಆರ್‌ಇಎಸ್), ದಿನಾಂಕ: 11ನೇ ಜುಲೈ, 2016.

| | |
|---|---|
| *2. 20.08.2013ರಂದು ನಿರ್ಧರಿಸಲಾದ ದಂಡ ಪ್ರಕ್ರಿಯಾ ಸಂಹಿತೆ ಸಂ.5934/2009 ಮುಕ್ಕಾತಿರ ಅನಿತಾ ಮಾಚಯ್ಯ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು* | *(ಉಲ್ಲೇ) 13* |
| *3. 22.01.2014ರಂದು ನಿರ್ಧರಿಸಲಾದ ಕ್ರಿಮಿನಲ್ ಸಂಹಿತೆ 100046/2014 ಡಾ|| ಗುರುರಾಜ್, ಮತ್ತು ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ* | *(ಉಲ್ಲೇ) 14* |
| *4. 1999 ಕ್ರಿಮಿನಲ್ ಎಲ್.ಜೆ.1592 ಎಂಎಎಮ್ ಚಾಂದ್ ಮತ್ತು ಇತರರು –ವಿರುದ್ಧ– ರಾಜ್ಯ* | *(ಉಲ್ಲೇ) 14* |
| *5. 1981 ಕ್ರಿಮಿನಲ್ ಎಲ್.ಜೆ. 356 ಪಿ. ಕುನ್ಹುಮಹಮದ್ –ವಿರುದ್ಧ– ಕೇರಳ ರಾಜ್ಯ* | *(ಉಲ್ಲೇ) 14* |
| *6. (1992) 1 ಎಸ್‌ಸಿಸಿ ಎಸ್‌ಯುಪಿಪಿ 535 ಹರಿಯಾಣ ರಾಜ್ಯ –ವಿರುದ್ಧ– ಭಜನ್‌ಲಾಲ್* | *(ಉಲ್ಲೇ) 16* |

ಅರ್ಜಿದಾರರ ಪರ: ಶ್ರೀ ಎಫ್.ವಿ. ಪಾಟೀಲ್ ಮತ್ತು ಶ್ರೀ ನಂದೀಶ್ ಪಾಟೀಲ್, ವಕೀಲರುಗಳು.

1 ಮತ್ತು 2ರ ಪ್ರತ್ಯರ್ಜಿದಾರರ ಪರ: ಶ್ರೀ ಪ್ರವೀಣ್ ಕೆ. ಉಪ್ಪಾರ್, ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು.

3ನೇ ಪ್ರತ್ಯರ್ಜಿದಾರರ ಪರ: ಶ್ರೀ ವಿ.ಎಂ. ಶೀಲವಂತ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ :**

ಅರ್ಜಿದಾರನು, ಅನಿವಾಸಿ ಭಾರತೀಯನಾಗಿದ್ದು, 3ನೇ ಎದುರುದಾರರ ಮಗಳಾದ ಶ್ರೀಮತಿ ಸವಿತಾ ಎಂಬಾಕೆಯನ್ನು ವಿವಾಹವಾಗಿದ್ದಾರೆ. ವಿವಾಹಬಂಧನದ

ನಂತರ ಮಗನಾದ ಮಾಸ್ಟರ್ ಇಶಾನ್ ಎಂಬ ಮಗು ದಿನಾಂಕ 21.11.2011ರಂದು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಜನಿಸಿತ್ತು. ಅರ್ಜಿದಾರರು ದಿನಾಂಕ 6.2.2013ರಂದು ತನ್ನ ಹೆಂಡತಿ ಮತ್ತು ಮಗುವಿನೊಂದಿಗೆ ಬೆಂಗಳೂರಿಗೆ ಬಂದಿದ್ದಾರೆ. ಅರ್ಜಿದಾರರೊಬ್ಬರೇ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಹಿಂದಿರುಗಿದ್ದಾರೆ. ನಂತರ ಅರ್ಜಿದಾರನು ತನ್ನ ಪೋಷಕರ ಮೂಲಕ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಮಗುವನ್ನು ಕರೆದೊಯ್ಯಲು ಕೋರಿಕೊಂಡಾಗ, ಶ್ರೀಮತಿ ಸವಿತಾ, ಕೌಟುಂಬಿಕ ನ್ಯಾಯಾಲಯ, ಹುಬ್ಬಳ್ಳಿ, ಇಲ್ಲಿ ಜಿ ಮತ್ತು ಡಬ್ಲ್ಯೂ ಸಂಖ್ಯೆ 5/2013ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಪೊಲೀಸರ ನೆರವಿನೊಂದಿಗೆ ಮಗುವನ್ನು ಶ್ರೀಮತಿ ಸವಿತಾ ಪಡೆದುಕೊಂಡಿರುವುದಾಗಿ ಮೆಮೊವನ್ನು ಸಲ್ಲಿಸಿದ್ದು, ಅರ್ಜಿಯನ್ನು ಹಿಂಪಡೆದಿದ್ದರಿಂದ ವಿಲೇವಾರಿ ಮಾಡಲಾಗಿತ್ತು. ಶ್ರೀಮತಿ ಸವಿತಾರವರು ತಾನು ಮಾಸ್ಟರ್ ಇಶಾನ್‌ನ ಕಾನೂನುಬದ್ಧ ಮತ್ತು ಒಟ್ಟಾರೆ ಪೋಷಕರೆನ್ನುವ ಘೋಷಣೆಯನ್ನು ಕೋರಿ ಮತ್ತು ಪಾಸ್‌ಪೋರ್ಟನ್ನು ಹಸ್ತಾಂತರಿಸಲು ಅರ್ಜಿದಾರನಿಗೆ ಸೂಚನೆಗಳನ್ನು ಹೊರಡಿಸಲು ಘೋಷಣೆಯನ್ನು ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಜಿ ಮತ್ತು ಡಬ್ಲ್ಯೂ ಸಂಖ್ಯೆ 13/2013ರಲ್ಲಿ ಸಲ್ಲಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲು ಸಲ್ಲಿಸಿದ ವ್ಯಾಜ್ಯಕಾಲೀನ ಅರ್ಜಿಯನ್ನು ಆದೇಶವು ವಜಾಗೊಳಿಸಿ ಸಂಕೀರ್ಣ ಮೊದಲ ಅರ್ಜಿ ಸಂಖ್ಯೆ 101490/2014ನ್ನು ಸಲ್ಲಿಸಲಾಗಿತ್ತು ಮತ್ತು ಮಧ್ಯಕಾಲೀನ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿತ್ತು. ದಿನಾಂಕ 14.07.2015ರಂದು ಮಾಸ್ಟರ್ ಇಶಾನ್‌ನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರಲಿಲ್ಲ ಮತ್ತು ಅವನನ್ನು ಹುಬ್ಬಳ್ಳಿಯ ತತ್ವದರ್ಶಿನಿ ಆಸ್ಪತ್ರೆಯಲ್ಲಿ ಸೇರಿಸಲಾಗಿದೆಯೆಂದು ಮತ್ತು ಸಂದೇಹಾಸ್ಪದ ಡೆಂಗ್ಯೂ ಜ್ವರದಿಂದ ಬಳಲುತ್ತಿರುವ ಮಗುವನ್ನು ಆಸ್ಪತ್ರೆಗೆ ಹೋಗಿ ಸಂದರ್ಶಿಸಲು ಮತ್ತು ಮಗುವಿನ ಸ್ಥಿತಿಯನ್ನು ನೋಡಲು ಅರ್ಜಿದಾರನು ಸ್ವತಂತ್ರನಾಗಿರುವನೆಂದು ವಿವರಣೆ ಮಾಡಲಾಗಿದ್ದು, ಅರ್ಜಿದಾರನು ಆಸ್ಪತ್ರೆಗೆ ಹೋದನು. ಅರ್ಜಿದಾರ ಮತ್ತು 3ನೇ ಎದುರುದಾರನ ಮಧ್ಯೆ ಜಗಳ ನಡೆದಿದ್ದು ಗೋಕುಲ್ ರಸ್ತೆ ಪೊಲೀಸು ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿತ್ತು. ಪೊಲೀಸರು ಭಾರತೀಯ ದಂಡ ಸಂಹಿತೆಯ 506, 504 ಮತ್ತು 323ನೇ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳಿಗಾಗಿ ಅರ್ಜಿದಾರನ

ವಿರುದ್ಧ ಅಪರಾಧ ಸಂಖ್ಯೆ 92/2015ರಲ್ಲಿ ಪೊಲೀಸು ಪ್ರಕರಣವನ್ನು ದಾಖಲಿಸಿದ್ದರು. ಹುಬ್ಬಳ್ಳಿಯ ಜೆಎಂಎಫ್‌ಸಿ 1ನೇ ಹೆಚ್ಚುವರಿ ಜೆಎಂಎಫ್‌ಸಿಗೆ ಸಲ್ಲಿಸಿದ ಪ್ರಥಮ ಮಾಹಿತಿ ವರದಿಯನ್ನು ಖಂಡಿಸಿ, ರಿಟ್ ಅರ್ಜಿ ಸಂ.108985/2015ನ್ನು ಸಲ್ಲಿಸಲಾಗಿತ್ತು. 2ನೇ ಸಂಖ್ಯೆ ಎದುರುದಾರನು ತನಿಖೆಯನ್ನು ಪೂರ್ಣಗೊಳಿಸಿ ಅನುಬಂಧ–ಎಚ್ ಪ್ರಕಾರ ದೋಷಾರೋಪ ಪಟ್ಟಿಯನ್ನು ಸಲ್ಲಿಸಿ, ಮೆಮೊವನ್ನು ಸಲ್ಲಿಸಿ, ರಿಟ್ ಅರ್ಜಿಯನ್ನು ಹಿಂಪಡೆದುದರಿಂದ ವಜಾಗೊಳಿಸಲಾಗಿತ್ತು. ಮಾನ್ಯ ಮ್ಯಾಜಿಸ್ಟ್ರೇಟ್‌ರವರು ಭಾರತೀಯ ದಂಡ ಸಂಹಿತೆಯ 323, 504 ಮತ್ತು 506ನೇ ಪ್ರಕರಣಗಳ ಮೇರೆಗಿನ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಂಡು, ಸಿ.ಸಿ. ಸಂಖ್ಯೆ 6507/2015ನ್ನು ದಾಖಲಿಸಿದರು ಮತ್ತು ಅನುಬಂಧ–ಕೆ ನಲ್ಲಿರುವಂತೆ ಆದೇಶದ ಪ್ರಕಾರ ಆರೋಪಿಯೆಂದು ನೇರವಾಗಿ ಆಪಾದಿಸಿ ಅರ್ಜಿದಾರನಿಗೆ ಜಾಮೀನುರಹಿತ ವಾರೆಂಟ್‌ಅನ್ನು ಹೊರಡಿಸಿದ್ದಾರೆ. ಅನುಬಂಧ–ಜೆ ಪ್ರಕಾರ ಪೊಲೀಸರ ಹಿಂಬರಹವನ್ನು ಅನುಬಂಧ–ಎಚ್ ಪ್ರಕಾರ ದೋಷಾರೋಪ – ಪಟ್ಟಿಯನ್ನು ರದ್ದುಗೊಳಿಸಲು ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು.

2. 3ನೇ ಸಂಖ್ಯೆಯ ಎದುರುದಾರನು ಆಕ್ಷೇಪಣೆಗಳ ಪಟ್ಟಿಯನ್ನು ಸಲ್ಲಿಸಿದ್ದಾರೆ. ಅವನ ಪ್ರಕಾರ, ಅರ್ಜಿದಾರನು ಅವನ ಕುತ್ತಿಗೆಯನ್ನು ಹಿಡಿದುಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಮತ್ತು ಆಸ್ಪತ್ರೆಯಲ್ಲಿ ಥಳಿಸಿದ್ದಾನೆ. ಆದುದರಿಂದ 2ನೇ ಎದುರುದಾರನ ಮುಂದೆ ದೂರನ್ನು ನೀಡಿದ್ದು, ಇವರು ಮ್ಯಾಜಿಸ್ಟ್ರೇಟ್‌ರವರ 'ಅನುಮತಿ'ಯನ್ನು ಕೋರಿದ್ದು, 'ಅನುಮತಿಯನ್ನು ನೀಡಲಾಗಿದ್ದು, ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿತ್ತು ಮತ್ತು ಆರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು.

3. ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಎಫ್.ವಿ. ಪಾಟೀಲ್‌ರವರ, 1 ಮತ್ತು 2ನೇ ಸಂಖ್ಯೆಯ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಪ್ರವೀಣ್ ಕೆ. ಉಪ್ಪಾರ್‌ರವರ 3ನೇ ಸಂಖ್ಯೆಯ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ವಿ.ಎಂ. ಶೀಲವಂತ್‌ರವರ ವಾದವನ್ನು ಆಲಿಸಲಾಗಿದೆ ಮತ್ತು ದಾಖಲೆಯನ್ನು ಅವಗಾಹನೆ ಮಾಡಲಾಗಿದೆ.

4. ಸದರಿ ದೂರನ್ನು ಸ್ವೀಕರಿಸಿದ ನಂತರ, ಪೊಲೀಸರು, ಭಾರತೀಯ ದಂಡ ಸಂಹಿತೆಯ 323, 504 ಮತ್ತು 506ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಎನ್.ಸಿ.ಸಂಖ್ಯೆ 2/2015ನ್ನು ದಾಖಲಿಸಿದ್ದಾರೆ. ಅಪರಾಧಗಳು ಸಂಜ್ಞೇಯತೆಯಿಂದ ಕೂಡಿರದಿದ್ದರೂ, ಅನುಬಂಧ–ಜೆ ಯನ್ನು ಸಲ್ಲಿಸುವ ಮೂಲಕ ತನಿಖೆಯನ್ನು ಕೈಗೆತ್ತಿಕೊಳ್ಳಲು ಮ್ಯಾಜಿಸ್ಟ್ರೇಟ್‌ರವರ 'ಅನುಮತಿ'ಯನ್ನು ಕೋರಲಾಗಿತ್ತು. ಸಂಬಂಧಪಟ್ಟಿರುವ ಇದನ್ನು ಈ ಮುಂದಿನಂತೆ ಉದ್ಧೃತಗೊಳಿಸಲಾಗಿದೆ:

"ಕ್ರಮಾಂಕ/99/2015

ಪೊಲೀಸ್ ಇನ್ಸ್‌ಪೆಕ್ಟರ್,
ಗೋಕುಲ ರೋಡ್ ಪೊಲೀಸ್,
ದಿನಾಂಕ: 15/07/2015

ಮಾನ್ಯ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
1ನೇ ನ್ಯಾಯಾಲಯ ಹುಬ್ಬಳ್ಳಿರವರ ನ್ಯಾಯಾಲಯಕ್ಕೆ,

ಮಾನ್ಯರೇ,

ವಿಷಯ: ಹುಬ್ಬಳ್ಳಿ ಗೋಕುಲ ರೋಡ್ ಪೊಲೀಸ್ ಠಾಣೆ ಎನ್.ಸಿ. ನಂ.02/2015ನೇದ್ದನ್ನು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಕೊಳ್ಳಲು ಅನುಮತಿ ನೀಡುವ ವಿನಂತಿ–ಕುರಿತು.

----

ಮೇಲಿನ ವಿಷಯದ ಮೇರೆಗೆ ಮಾನ್ಯ ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ 14.7.2015ರಂದು ಒಬ್ಬ ಶ್ರೀ ಸುಭಾಸ್‌ಚಂದ್ರ ತಂದೆ ವೀರಭದ್ರಪ್ಪ ಎಲಿ ಸಾ: ಪ್ಲಾಟ್ ನಂ.19, ಹಸ್ತನಾಪೂರ ಲೇಔಟ್, ಕೇಶ್ವಾಪೂರ, ಹುಬ್ಬಳ್ಳಿ ಇವರು ತಮ್ಮ ಲಿಖಿತ ದೂರು ಕೊಟ್ಟಿದ್ದರಲ್ಲಿ ಸದರಿಯುವರು ದಿನಾಂಕ

14.07.2015ರಂದು ಸಂಖ್ಯೆ 7.00 ಗಂಟೆಯ ಸುಮಾರಿಗೆ ಗೋಕುಲ ರೋಡ್ ತತ್ವದರ್ಶ ಆಸ್ಪತ್ರೆಯಲ್ಲಿದ್ದಾಗ ಅವರ ಅಳಿಯ ಪ್ರವೀಣ ಶಿವಳ್ಳಿ ಸಾ: ಸರೋವರ ನಗರ, ಧಾರವಾಡ ಇವರು ಫಿರ್ಯಾದುದಾರರಿಗೆ ಅವಾಚ್ಯವಾಗಿ ಬೈದು, ಕೈಯಿಂದ ಹೊಡೆದು ಜೀವ ಬೆದರಿಕೆ ಹಾಕಿದ್ದು, ಅವರಿಂದ ನನಗೆ ಪ್ರಾಣಭಯ ಇದ್ದು, ಕಾರಣ ಸದರಿಯವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳಲು ವಿನಂತಿ ಅಂತಾ ವಗೈರೆ ಇದ್ದ ದೂರನ್ನು ನಮ್ಮ ಠಾಣೆಯ ಎನ್.ಸಿ. ನಂ.02/ 2015ಕಲಂ 323, 504, 506ಐ.ಪಿ.ಸಿ.ನೇದ್ದಕ್ಕೆ ದಾಖಲು ಮಾಡಿಕೊಂಡಿದ್ದು ಇರುತ್ತದೆ.

**ಸದರಿ ಪ್ರಕರಣ ಎನ್.ಸಿ. (ನಾನ್ ಕಾಗ್ನಿಜೆಬಲ್) ಸ್ವರೂಪದಿದ್ದು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲು ಮಾನ್ಯ ನ್ಯಾಯಾಲಯದಿಂದ ಅನುಮತಿ ದೊರೆಯಲು ವಿನಂತಿ**.

ತಮ್ಮ ವಿಶ್ವಾಸಿ,

ಸಹಿ/–
(ಠಾಣಾಧಿಕಾರಿ)
ಗೋಕುಲ ರೋಡ್, ಪೊಲೀಸ್ ಠಾಣೆ,
ಹುಬ್ಬಳ್ಳಿ.

5. ಅನುಬಂಧ–ಜೆ ನಲ್ಲೇ ಮ್ಯಾಜಿಸ್ಟ್ರೇಟ್‌ರವರು, ಅನುಮತಿಸಲಾಗಿದೆಯೆಂದು ಹಿಂಬರಹ ನೀಡಿದ್ದು ತನಿಖೆಯನ್ನು ನಡೆಸಲಾಗಿತ್ತು ಮತ್ತು ಆರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು.

6. ಶ್ರೀ ಎಫ್.ವಿ. ಪಾಟೀಲ್‌ರ ಮುಖ್ಯ ವಾದವೇನೆಂದರೆ ಆಪಾದಿತ ಅಪರಾಧಗಳು ಅಸಂಜ್ಞೇಯವಾಗಿರುವ 2ನೇ ಎದುರುದಾರನು ಅಳವಡಿಸಿಕೊಂಡ

ಪ್ರಕ್ರಿಯೆ ಎಂದರೆ ತನಿಖೆ ನಡೆಸುವುದಕ್ಕಾಗಿ ಅನುಮತಿ ನೀಡಲು ಮ್ಯಾಜಿಸ್ಟ್ರೇಟ್‌ರವರಿಗೆ ಮನವಿಯನ್ನು ಸಲ್ಲಿಸಿರುವುದಕ್ಕೆ ಕಾನೂನಿನ ಅಧಿಕಾರವಿರುವುದಿಲ್ಲ ಮತ್ತು ತಮ್ಮ ಮನಬಂದಂತೆ ಮ್ಯಾಜಿಸ್ಟ್ರೇಟ್‌ರವರು ನೀಡಿದ 'ಅನುಮತಿ ಯಾಂತ್ರಿಕವಾಗಿದೆ ಮತ್ತು ಅಸಮಂಜಸವಾಗಿದೆ ಮತ್ತು ಕಾನೂನುಬಾಹಿರವಾಗಿದೆ ಮತ್ತು 'ಆಜ್ಞಾದಾಯಕ'ವಾಗಿಲ್ಲದಿರುವುದಾಗಿದೆ ಎಂಬುದಾಗಿದ್ದು, ಅರ್ಜಿಯನ್ನು ಪುರಸ್ಕರಿಸಲು ತಕ್ಕುದ್ದಾಗಿರುತ್ತದೆ.

7. ಮತ್ತೊಂದು ಕಡೆ ಮಾನ್ಯ ವಕೀಲರಾದ ಶ್ರೀ ಪ್ರವೀಣ್ ಕೆ. ಉಪ್ಪಾರ್‌ರವರು ಮತ್ತು ವಿ.ಎಂ. ಶೀಲವಂತ್‌ರವರ ನಿವೇದನೆಗಳು ಏನೆಂದರೆ, ಮಾನ್ಯ ಮ್ಯಾಜಿಸ್ಟ್ರೇಟ್‌ರವರು ನೀಡಿದ ಅನುಮತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತನಿಖೆಯನ್ನು ನಡೆಸಿ ಆರೋಪ ಪಟ್ಟಿಯನ್ನು ಸಲ್ಲಿಸಿ, ಕ್ರಿಮಿನಲ್ ನ್ಯಾಯಾಲಯದ ಮುಂದೆ ಅಧಿವಿಚಾರಣೆಯನ್ನು ಎದುರಿಸಬೇಕು ಎಂಬುದಾಗಿದೆ.

8. ಅರ್ಜಿದಾರನ ವಿರುದ್ಧ 3ನೇ ಎದುರುದಾರನು ಆರೋಪಿಸಿದ ಅಪರಾಧಗಳು, ಅಸಂಜ್ಞೇಯವಾಗಿರುವಾಗ ಭಾರತೀಯ ದಂಡ ಸಂಹಿತೆಯ 504, 506 ಮತ್ತು 323ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪೊಲೀಸರು ಎನ್.ಸಿ. (Non congizant) ಸಂಖ್ಯೆ 2/2015ನ್ನು ದಾಖಲಿಸಿದ್ದರು. ಪೊಲೀಸರಿಗೆ ಮಾಹಿತಿದಾರನನ್ನು ತಿಳಿಸುವ ಬದಲು ಅಸಂಜ್ಞೇಯ ಅಪರಾಧಗಳ ತನಿಖೆಗಾಗಿ ದಂಡಾಧಿಕಾರಿಯವರ ಅನುಮತಿಯನ್ನು ಕೋರಿರುವ 2ನೇ ಎದುರುದಾರನಲ್ಲಿ ಕಾನೂನು ಬಾಹಿರತೆ ತಲೆದೋರಿದೆ.

9. ಸಿದ್ಧ ಉಲ್ಲೇಖಗಳಿಗೆ ಸಂಬಂಧಪಟ್ಟಿರುವ ದಂಡ ಪ್ರಕ್ರಿಯಾ ಸಂಹಿತೆ 1973ರ 155ನೇ ಪ್ರಕರಣವನ್ನು ಈ ಮುಂದಿನಂತೆ ಉದ್ಧೃತಗೊಳಿಸಲಾಗಿದೆ:

> *"**155. ಅಸಂಜ್ಞೇಯ ಮೊಕದ್ದಮೆಗಳ ಬಗ್ಗೆ ಸಮಾಚಾರ ಮತ್ತು ಅಂಥ ಮೊಕದ್ದಮೆಗಳ ಅನ್ವೇಷಣೆ.**– (1) ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗೆ ಅಂತಹ ಠಾಣೆಯ ಪರಿಮಿತಿಗಳೊಳಗೆ*

*ಒಂದು ಅಸಂಜ್ಞೇಯ ಅಪರಾಧವು ನಡೆಯುವ ಬಗ್ಗೆ ಸಮಾಚಾರವನ್ನು ಕೊಟ್ಟಾಗ, ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂತಹ ಅಧಿಕಾರಿಯು ಇಡಬೇಕಾದ ಪುಸ್ತಕದಲ್ಲಿ ಅವನು ಸಮಾಚಾರದ ಸಾರಾಂಶವನ್ನು ಬರೆಯತಕ್ಕುದು ಅಥವಾ ಬರೆಸತಕ್ಕುದು ಮತ್ತು ಸಮಾಚಾರ ಕೊಟ್ಟವನನ್ನು ಮ್ಯಾಜಿಸ್ಟ್ರೇಟನ ಬಳಿಗೆ ಕಳಿಸತಕ್ಕುದು.*

*(2) ಯಾವ ಪೊಲೀಸ್ ಅಧಿಕಾರಿಯೂ ಒಂದು ಅಸಂಜ್ಞೇಯ ಮೊಕದ್ದಮೆಯನ್ನು, ಅಂತಹ ಮೊಕದ್ದಮೆಯನ್ನು ವಿಚಾರಣೆ ಮಾಡಲು ಅಥವಾ ಆರೋಪ ವಿಚಾರಣೆಗೆ ಗುರಿಪಡಿಸಲು ಶಕ್ತಿ ಹೊಂದಿರುವ ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ, ಅನ್ವೇಷಣೆ ಮಾಡತಕ್ಕುದಲ್ಲ.*

*(3) ಅಂಥ ಆದೇಶವನ್ನು ಪಡೆಯುವ ಯಾರೇ ಪೊಲೀಸ್ ಅಧಿಕಾರಿಯು, ಒಂದು ಅನ್ವೇಷಣೆಯ ಬಗ್ಗೆ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯು ಸಂಜ್ಞೇಯ ಮೊಕದ್ದಮೆಯಲ್ಲಿ ಚಲಾಯಿಸಬಹುದಾದ ಶಕ್ತಿಗಳನ್ನು (ವಾರಂಟಿಲ್ಲದೆ ದಸ್ತಗಿರಿ ಮಾಡಲು ಇರುವ ಶಕ್ತಿಯ ಹೊರತಾಗಿ) ಚಲಾಯಿಸಬಹುದು.*

*(4) ಒಂದು ಮೊಕದ್ದಮೆಯು ಎರಡು ಅಥವಾ ಹೆಚ್ಚಿನ ಅಪರಾಧಗಳಿಗೆ ಸಂಬಂಧಿಸಿದ್ದು ಅವುಗಳಲ್ಲಿ ಕೊನೆಯಪಕ್ಷ ಒಂದಾದರೂ ಸಂಜ್ಞೇಯವಾಗಿರುವಲ್ಲಿ ಇತರ ಅಪರಾಧಗಳು ಅಸಂಜ್ಞೇಯವಾಗಿದ್ದರೂ ಆ ಮೊಕದ್ದಮೆಯನ್ನು ಒಂದು ಸಂಜ್ಞೇಯ ಮೊಕದ್ದಮೆಯೆಂದು ಭಾವಿಸತಕ್ಕುದು.*

10. ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣವು, ಅಸಂಜ್ಞೇಯ ಅಪರಾಧ ಮಾಡುವುದಕ್ಕೆ ಸಂಬಂಧಪಟ್ಟಂತೆ ಪ್ರಭಾರಿ ಪೊಲೀಸು ಠಾಣಾ ಅಧಿಕಾರಿಯು

ಸ್ವೀಕರಿಸಿದ ಸಮಾಚಾರದ ಸಂಬಂಧದಲ್ಲಿ ಅಳವಡಿಸಿಕೊಳ್ಳಬೇಕಾದ ಪ್ರಕ್ರಿಯೆಯನ್ನು ವಿವರಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ (1)ನೇ ಉಪ–ಪ್ರಕರಣದ ಪ್ರಕಾರ ಅಸಂಜ್ಞೇಯ ಅಪರಾಧ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಪ್ರಭಾರದಲ್ಲಿರುವ ಪೊಲೀಸು ಠಾಣಾ ಅಧಿಕಾರಿಯು ಸಮಾಚಾರವನ್ನು ಸ್ವೀಕರಿಸಿದಾಗ, ಅವನು ನಿಯಮಿಸಲಾದ ನಮೂನೆಯಲ್ಲಿ ಅಂಥ ಅಧಿಕಾರಿಯು ನಿರ್ವಹಿಸಬೇಕಾದ ಪುಸ್ತಕದಲ್ಲಿ ಮಾಹಿತಿಯ ಸಾರಾಂಶವನ್ನು ಅವನು ಬರೆಯತಕ್ಕದ್ದು ಅಥವಾ ಬರೆಸತಕ್ಕದ್ದು ಮತ್ತು ದಂಡಾಧಿಕಾರಿಯವರ ಬಳಿಗೆ ಮಾಹಿತಿದಾರನನ್ನು ಕಳುಹಿಸತಕ್ಕದ್ದು. ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ (2)ನೇ ಉಪ–ಪ್ರಕರಣವು, ಪೊಲೀಸು ಅಧಿಕಾರಿಯು ದಂಡಾಧಿಕಾರಿಯವರ ಆದೇಶವಿಲ್ಲದೆ ಅಂಥ ಪ್ರಕರಣವನ್ನು ಆರೋಪ ವಿಚಾರಣೆ ಮಾಡಲು ಅಥವಾ ಅಂಥ ಪ್ರಕರಣವನ್ನು ಅಧಿವಿಚಾರಣೆ ನಡೆಸಲು ಸಂಜ್ಞೇಯುವಲ್ಲದ ಪ್ರಕರಣದ ತನಿಖೆಯನ್ನು ನಡೆಸತಕ್ಕದ್ದಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ (1)ನೇ ಉಪ–ಪ್ರಕರಣವು, ಸಂಜ್ಞೇಯವಲ್ಲದ ಅಪರಾಧ ಮಾಡಿರುವುದಕ್ಕೆ ಸಂಬಂಧಿಸಿದಂತೆ ನಿಯಮಿಸಲಾದ ಪುಸ್ತಕದಲ್ಲಿ ಸಮಾಚಾರವನ್ನು ಬರೆಯುವ ಅಥವಾ ಬರೆಸುವ ಸಮಾಚಾರವನ್ನು ಸ್ವೀಕರಿಸುವ ಸಂಬಂಧ ಸ್ಟೇಷನ್ ಹೌಸ್ ಆಫೀಸರ್ (ಠಾಣಾಧಿಕಾರಿ)ಗೆ ಕರ್ತವ್ಯವನ್ನು ನೀಡಿರುತ್ತದೆ ಮತ್ತು ದಂಡಾಧಿಕಾರಿಯವರಿಗೆ ಮಾಹಿತಿದಾರನನ್ನು ತಿಳಿಸುವ ಕರ್ತವ್ಯವನ್ನು ನೀಡಿರುತ್ತದೆ, ಠಾಣಾಧಿಕಾರಿಯವರೇ ದಂಡಾಧಿಕಾರಿಯವರನ್ನು ಸಂಪರ್ಕಿಸುವುದನ್ನು ಮತ್ತು ಆದೇಶಗಳನ್ನು ಕೋರುವುದನ್ನು ಅಧಿಕೃತಗೊಳಿಸಿರುವುದಿಲ್ಲ. ಉಪಬಂಧವು, ಠಾಣಾಧಿಕಾರಿಯು (ಎಸ್‌ಹೆಚ್‌ಓ) ಸಮಾಚಾರ ನೀಡುವವನನ್ನು ಮ್ಯಾಜಿಸ್ಟ್ರೇಟರಲ್ಲಿಗೆ ಕಳುಹಿಸತಕ್ಕದ್ದು ಆ ಮೂಲಕ ಪ್ರಕರಣದ ತನಿಖೆ ನಡೆಸಲು ಪೊಲೀಸರಿಗೆ ಸೂಚನೆ ನೀಡುವುದಕ್ಕಾಗಿ ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಯವರ ಆದೇಶಗಳನ್ನು ಕೋರುವುದು ಸಮಾಚಾರ ನೀಡುವವನಿಗೆ ಸಂಬಂಧಪಟ್ಟಿದೆಯೆಂಬುದನ್ನು ಸ್ಪಷ್ಟ ಮಾಡುತ್ತದೆಯೆಂಬುದನ್ನು ಸ್ಫುಟಗೊಳಿಸುತ್ತದೆ. ಸಮಾಚಾರ ನೀಡುವವನು ದಂಡಾಧಿಕಾರಿಯವರನ್ನು ಸಂಪರ್ಕಿಸಿದ ನಂತರ ತನಿಖೆಗೆ ಆದೇಶಿಸಬೇಕಿದ್ದರೆ, ಸಂಬಂಧಪಟ್ಟ ಠಾಣಾಧಿಕಾರಿಯು ಅಪರಾಧವನ್ನು ದಾಖಲಿಸಲು ಅಧಿಕಾರ

ವ್ಯಾಪ್ತಿಯನ್ನು ಪಡೆದುಕೊಳ್ಳುವುದು, ವಿಷಯದ ತನಿಖೆಯನ್ನು ನಡೆಸುವುದು ಮತ್ತು ಇಲ್ಲದಿದ್ದರೆ ನಡೆಸದಿರುವುದು.

11. ಕರ್ನಾಟಕ ಪೊಲೀಸು ಕೈಪಿಡಿಯು ಶಾಸನಬದ್ಧ ಬಲವನ್ನು ಹೊಂದಿಲ್ಲ. ಆದರೆ, ಸಂಜ್ಞೇಯವಲ್ಲದ ಪ್ರಕರಣಗಳಿಗೆ ಸಂಬಂಧಪಟ್ಟಂತೆ XXVIIನೇ ಅಧ್ಯಾಯದ 1211ರ ಕ್ರಮಾದೇಶದಲ್ಲಿ ಇಲಾಖಾ ಅಧಿಕಾರಿಗಳ ಮಾರ್ಗಸೂಚಿಗಳನ್ನು ಒಳಗೊಂಡಿರುತ್ತದೆ. ಅದನ್ನು ಈ ಮುಂದಿನಂತೆ ತಿಳಿಸಲಾಗಿದೆ:

> "1211.(1) ಪೊಲೀಸು ಅಧಿಕಾರಿಯು, ಸಂಜ್ಞೇಯವಲ್ಲದ ಪ್ರಕರಣವಿದ್ದಲ್ಲಿ, ದಂಡಾಧಿಕಾರಿಯವರ ಮುಂದೆ ಸಮಾಚಾರವನ್ನು ಮಂಡಿಸುವ ಅಗತ್ಯವಿದೆಯೆಂದು ಗುರುತಿಸಿದಲ್ಲಿ, ಅವನು ದಂಡ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ ಅವನು, ಅಂಥ ಅಪರಾಧವನ್ನು ರೂಪಿಸುವ ಸಂಗತಿಗಳನ್ನು ಲಿಖಿತದಲ್ಲಿ ದಂಡಾಧಿಕಾರಿಯವರಿಗೆ ವರದಿ ಮಾಡಬಹುದು.
>
> (2) ಒಬ್ಬ ನಿರ್ದಿಷ್ಟ ವ್ಯಕ್ತಿಯ ವಿರುದ್ಧ ಸತತವಾಗಿ ದೂರುಗಳಿದ್ದು ಅದು ಕಾನೂನುಬದ್ಧವಾಗಿ ಸಂಜ್ಞೇಯವಲ್ಲದ ಅಪರಾಧದ ಪ್ರವರ್ಗದ ಅಡಿಯಲ್ಲಿ ಬರುತ್ತಿದ್ದರೆ, ಈ ಮುಂದಿನ ಕ್ರಮವನ್ನು ಕೈಗೊಳ್ಳಬಹುದು–
>
> (ಎ) ಸಂಜ್ಞೇಯವಲ್ಲದ ಪ್ರಕರಣವನ್ನು ನೋಂದಾಯಿಸಲು ಸಕ್ಷಮ ನ್ಯಾಯಾಲಯದ ಆದೇಶಗಳನ್ನು ಸ್ವೀಕರಿಸಬಹುದು ಮತ್ತು ತನಿಖೆ ನಡೆಸಬಹುದು ಮತ್ತು/ಅಥವಾ
>
> (ಬಿ) ನೀಡಲಾದ ನಿರ್ದಿಷ್ಟ ವ್ಯಕ್ತಿಯು ಸಂಜ್ಞೇಯವಲ್ಲದ ಅಪರಾಧವನ್ನು ಸತತವಾಗಿ ಮಾಡಿದ್ದು ಶಾಂತಿ ಭಂಗವಾಗಿದ್ದರೆ

ದಂಡ ಪ್ರಕ್ರಿಯಾ ಸಂಹಿತೆಯ 110ನೇ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳಬಹುದು".

ಒಪ್ಪಿಕೊಳ್ಳಲಾದಂತೆ, ಅರ್ಜಿದಾರನ ವಿರುದ್ಧ ಯಾವುದೇ ಇತರ ದೂರು ಇರುವುದಿಲ್ಲ. ಆದುದರಿಂದ ಮೇಲಿನ 2(ಬಿ) ಖಂಡವು ಅನ್ವಯವಾಗುವುದಿಲ್ಲ.

12. ***ಆನಂದ್ ಸಿಂಗ್ –ವಿರುದ್ಧ– ಕರ್ನಾಟಕ ರಾಜ್ಯ***[1], ಪ್ರಕರಣದಲ್ಲಿ, ಈ ನ್ಯಾಯಾಲಯವು, 'ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ ಮೇರೆಗೆ, ಪೊಲೀಸು ಅಧಿಕಾರಿಯು ಪ್ರಕರಣವನ್ನು ತನಿಖೆ ಮಾಡಲು ಅನುಮತಿಯನ್ನು ಕೋರುವ ಮನವಿಯೊಂದಿಗೆ ದಂಡಾಧಿಕಾರಿಯವರನ್ನು ಸಂಪರ್ಕಿಸಲು ಶಕ್ತಿಯನ್ನು ಹೊಂದಿರುವುದಿಲ್ಲ'.

13. ***ಮುಕ್ಕಾತಿರ ಅನಿತಾ ಮಾಚಯ್ಯ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು***[2], 2ನೇ ಎದುರುದಾರ – ಸಮಾಚಾರ ನೀಡುವವನು ದೂರನ್ನು ಸಲ್ಲಿಸಿರುವುದರಿಂದ ಠಾಣಾಧಿಕಾರಿಯು ಪ್ರಕರಣವನ್ನು ದಾಖಲಿಸಿಕೊಂಡು ವಿಷಯದ ತನಿಖೆ ನಡೆಸಲು ಅನುಮತಿ ಕೋರುವುದಕ್ಕಾಗಿ ದಂಡಾಧಿಕಾರಿಯವರಿಗೆ ಕೋರಿಕೆಯನ್ನು ಸಲ್ಲಿಸಿದ್ದಾನೆ. ಸದರಿ ಕೋರಿಕೆಗೆ ಸಂಬಂಧಿಸಿದಂತೆ ದಂಡಾಧಿಕಾರಿಯವರು ಅನುಮತಿಯನ್ನು ನೀಡಿದ್ದರು. ತನಿಖೆಯನ್ನು ನಡೆಸಿದ್ದು ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು. ದೋಷಾರೋಪ ಪಟ್ಟಿಯನ್ನು ಮತ್ತು ಎಲ್ಲಾ ಸಂಬಂಧಪಟ್ಟ ಪ್ರಕ್ರಿಯೆಗಳನ್ನು ರದ್ದುಗೊಳಿಸಲು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ಅರ್ಜಿಯನ್ನು ಸಲ್ಲಿಸಲಾಗಿತ್ತು. ಠಾಣಾಧಿಕಾರಿಯು (ಎಸ್‌ಹೆಚ್‌ಓ) ಅಳವಡಿಸಿಕೊಂಡ ಪ್ರಕ್ರಿಯೆಗೆ ಕಾನೂನಿನ ಅಧಿಕಾರವಿಲ್ಲ ಎಂಬುದನ್ನು ಗಮನಿಸಿ, ಇದನ್ನು ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಿರಲಿಲ್ಲವೆಂದು ಅಭಿಪ್ರಾಯಪಟ್ಟಿದ್ದು ಆದುದರಿಂದ ಅಂಥ ಮನವಿಗೆ ದಂಡಾಧಿಕಾರಿಯವರು ನೀಡಿದ ಅನುಮತಿ ಯಾವುದೇ ಆಧಾರವನ್ನು ಸಹ

1. ದಿನಾಂಕ 22.10.08ರಂದು ನಿರ್ಧರಿಸಲಾದ ದಂಡ ಪ್ರಕ್ರಿಯಾ ಸಂಹಿತೆ ಸಂ.3082/2007

2. 20.08.2013ರಂದು ನಿರ್ಧರಿಸಲಾದ ದಂಡ ಪ್ರಕ್ರಿಯಾ ಸಂಹಿತೆ ಸಂ.5934/2009

ಹೊಂದಿಲ್ಲವೆಂದು ಹಾಗೆಯೇ ಕೈಗೊಂಡ ತನಿಖೆ ಮತ್ತು ಪೊಲೀಸರು ಅದರಲ್ಲಿ ಸಲ್ಲಿಸಿದ ಆರೋಪಪಟ್ಟಿಯು ಕಾನೂನಿನ ಅಧಿಕಾರವನ್ನು ಹೊಂದಿಲ್ಲವೆಂದು ಅಭಿಪ್ರಾಯಪಡಲಾಗಿತ್ತು ಮತ್ತು ಪ್ರಾರಂಭಿಸಲಾದ ಪ್ರಾಸಿಕ್ಯೂಷನನ್ನು ರದ್ದುಗೊಳಿಸಲಾಗಿತ್ತು.

14. ***ಡಾ|| ಗುರುರಾಜ್, ಮತ್ತು ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ***[3] ಪ್ರಕರಣದಲ್ಲಿ, ಅರ್ಜಿದಾರರು ಬಳಸಿದ ಬೈಗುಳದ ಪದಗಳು ಮತ್ತು ನೀಡಲಾದ ಜೀವ ಬೆದರಿಕೆಯನ್ನು ಆಪಾದಿಸಿ ಮತ್ತು ಕೆಲವು ಚಿನ್ನಾಭರಣಗಳನ್ನು ದೋಚಿರುವ ಕುರಿತು ಪೊಲೀಸರ ಮುಂದೆ ದೂರನ್ನು ದಾಖಲಿಸಲಾಗಿತ್ತು. ಪೊಲೀಸರು ಭಾರತೀಯ ದಂಡ ಸಂಹಿತೆಯ 504, 506 ಮತ್ತು 392ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪ್ರಕರಣವನ್ನು ದಾಖಲಿಸಿದ್ದಾರೆ ಮತ್ತು ತನಿಖೆಯನ್ನು ನಡೆಸಿದ್ದಾರೆ. ಭಾರತೀಯ ದಂಡ ಸಂಹಿತೆಯ 504 ಮತ್ತು 506ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳನ್ನು ಮಾತ್ರ ರೂಪಿಸಲಾಗಿದೆ ಎಂಬುದು ಕಂಡುಬರುತ್ತದೆ. ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು ಮತ್ತು ಭಾರತೀಯ ದಂಡ ಸಂಹಿತೆಯ 504, 506ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳ ಸಂಜ್ಞೇಯತೆಯನ್ನು ಸಂಜ್ಞಾನಕ್ಕೆ ತೆಗೆದುಕೊಂಡು ದಂಡಾಧಿಕಾರಿಯವರು ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿದ್ದಾರೆ ಮತ್ತು ಆಪಾದಿತರಿಗೆ ಸಮನುಗಳನ್ನು ಹೊರಡಿಸಲು ಆದೇಶಿಸಿದ್ದಾರೆ. ಪೊಲೀಸರಿಗೆ ಅಪರಾಧಗಳನ್ನು ತನಿಖೆ ನಡೆಸಲು ಅಧಿಕಾರ ನೀಡಲಾಗಿದೆ ಆದರೆ ಪೊಲೀಸರು ಸಂಜ್ಞೇಯವಲ್ಲದ ಅಪರಾಧಗಳನ್ನು ಮಾತ್ರ ನಡೆಸಲಾಗುವುದು ಎಂಬ ನಿರ್ಣಯಕ್ಕೆ ಬಂದರೆ ಆಗ ಅವರು ವರದಿಯನ್ನು ಸಲ್ಲಿಸಬಹುದು ಎಂಬ ಆಧಾರದ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮೂಲಕ ಸದರಿ ಕ್ರಮವನ್ನು ಟೀಕಿಸಲಾಗಿದ್ದು ದಂಡಾಧಿಕಾರಿಯವರು ಸಂಜ್ಞೇಯವಲ್ಲದ ಅಪರಾಧಗಳಿಗೆ ಸಂಜ್ಞೇಯತೆಯನ್ನು ಕೈಗೊಳ್ಳಬಹುದೇ ಅಥವಾ ಇದು ಯಾವುದೇ ಹೆಚ್ಚಿನ ತನಿಖೆಯನ್ನು ಅಗತ್ಯಪಡಿಸುತ್ತದೆಯೇ ಎಂಬುದನ್ನು ಭಾರತೀಯ ದಂಡ ಸಂಹಿತೆಯ 202ನೇ ಪ್ರಕರಣದ ಮೇರೆಗೆ ಪ್ರಕರಣವನ್ನು ಮರು ತನಿಖೆ ಮಾಡಲು ಪೊಲೀಸರಿಗೆ

3. 22.01.2014ರಂದು ನಿರ್ಧರಿಸಲಾದ ಕ್ರಿಮಿನಲ್ ಸಂಹಿತೆ 100046/2014

ವಿಷಯವನ್ನು ಕಳುಹಿಸುವ ಮೂಲಕ ದಂಡಾಧಿಕಾರಿಯವರು ವಿಷಯವನ್ನು ಅವಲೋಕಿಸಿ ಕಂಡುಹಿಡಿಯಬೇಕು. (i) ***ಮಾಮ್ ಚಾಂದ್ ಮತ್ತು ಇತರರು – ವಿರುದ್ಧ– ರಾಜ್ಯ***[4] ಮತ್ತು (ii) ***ಪಿ. ಕುನ್ಹು ಮಹಮದ್ –ವಿರುದ್ಧ– ಕೇರಳ ರಾಜ್ಯ***[5]**,** ಪ್ರಕರಣಗಳಲ್ಲಿನ ನಿರ್ಣಯಗಳ ಮೇಲೆ ಅವಲಂಬಿತರಾಗಿದ್ದರು. ವಿಷಯವನ್ನು ಪರಿಗಣನೆಗೆ ತೆಗೆದುಕೊಂಡು ಭಾರತೀಯ ದಂಡ ಸಂಹಿತೆಯ 504 ಮತ್ತು 506ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪೊಲೀಸರು ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುವರೆಂದು ಗುರುತಿಸಿ, ದಂಡಾಧಿಕಾರಿಯವರ ವಿವೇಚನೆಗೆ ತೆಗೆದುಕೊಳ್ಳದೆ, ಹಾಗೂ ಪೊಲೀಸರು ಸಲ್ಲಿಸಿದ ವರದಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 2(ಎಚ್) ಪ್ರಕರಣದ ಮೇರೆಗೆ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 202ನೇ ಪ್ರಕರಣದ ಮೇರೆಗೆ ದೂರು ಎಂದು ಪರಿಗಣಿಸಬೇಕಾಗುತ್ತದೆಯೇ ಎಂಬುದನ್ನು ಖಚಿತಪಡಿಸಲು ದೋಷಾರೋಪಪಟ್ಟಿಯನ್ನು ಅವಲೋಕಿಸದೆ, ಹೆಚ್ಚಿನ ತನಿಖೆಯನ್ನು ನಡೆಸಬೇಕೆಂದು ಪ್ರಶ್ನಿತ ಆದೇಶವನ್ನು ಹೊರಡಿಸಿದ್ದಾರೆ. ಪ್ರಕರಣವನ್ನು ದಂಡಾಧಿಕಾರಿಯವರಿಗೆ ಪುನಃ ಕಳುಹಿಸಲಾಗಿತ್ತು ಮತ್ತು ಕ್ರಿಮಿನಲ್ ಅರ್ಜಿಯನ್ನು ತದನುಸಾರವಾಗಿ ವಿಲೇವಾರಿ ಮಾಡಲಾಗಿತ್ತು.

15. ಪ್ರಸ್ತುತ ಪ್ರಕರಣದಲ್ಲಿ, 2ನೇ ಎದುರುದಾರನು, ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ (1)ನೇ ಉಪ–ಪ್ರಕರಣಕ್ಕೆ ವಿರುದ್ಧವಾಗಿ ಕಾರ್ಯ ನಿರ್ವಹಿಸಿದ್ದು, ಮಾನ್ಯ ದಂಡಾಧಿಕಾರಿಯವರು 'ಆದೇಶವನ್ನು' ಹೊರಡಿಸದೆ, ಇದರ ಬದಲು 'ಅನುಮತಿಸಲಾಗಿದೆ' ಎಂದು ನಮೂದಿಸಲಾಗಿದ್ದು, ಕಾನೂನಿನ ಕಣ್ಣಿನಲ್ಲಿ ಆದೇಶವಾಗಿರಲಿಲ್ಲ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 155ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿರುವ ನಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು ತನಿಖೆಯನ್ನು ನಡೆಸಲಾಗಿದೆ ಮತ್ತು ಭಾರತೀಯ ದಂಡ ಸಂಹಿತೆಯ 504, 506 ಮತ್ತು 323ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ತತ್ಪರಿಣಾಮದ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ ಮತ್ತು ಆ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಂಡು ಜಾಮೀನುರಹಿತ ವಾರಂಟನ್ನು ಹೊರಡಿಸಲಾಗಿದೆ. ಆಪಾದಿತನ

4. 1999 (ಕ್ರಿಮಿನಲ್ ಎಲ್.ಜೆ.1592

5. 1981 ಕ್ರಿಮಿನಲ್ ಎಲ್.ಜೆ. 356

ವಿರುದ್ಧದ ಪ್ರಕರಣದೊಟ್ಟಿಗೆ ಹೆಚ್ಚಿನ ವ್ಯವಹರಣೆಗಾಗಿ ಮೊದಲ ಉದಾಹರಣೆಯೇ ನಿಜವಾಗಿ ಕಾನೂನುಬಾಹಿರವಾದುದಾಗಿದೆ. ಪೊಲೀಸು ಮತ್ತು ದಂಡಾಧಿಕಾರಿಯವರು ವಿಷಯದಲ್ಲಿನ ಹೆಚ್ಚಿನ ವ್ಯವಹರಣೆ ನಡೆಸುವ ಮೊದಲು ಭಾರತೀಯ ದಂಡ ಸಂಹಿತೆಯ 155ನೇ ಪ್ರಕರಣವನ್ನು ನೋಡುವುದಕ್ಕೆ ತೊಂದರೆಯಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ವಿವೇಚನೆಯಿಲ್ಲದೆ ಪ್ರಕರಣಕ್ಕೆ ತಾಂತ್ರಿಕ ಮಾರ್ಗ ಗೋಚರವಾಗುತ್ತದೆ.

16. ಪ್ರಥಮ ಮಾಹಿತಿ ವರದಿಯ ನೋಂದಣಿ / ಆರೋಪ ಪಟ್ಟಿ/ ದೂರು ಮುಂತಾದುವನ್ನು ರದ್ದುಮಾಡಲು ಯಾವ ರೀತಿಯಲ್ಲಿ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಅಂತರ್ನಿಹಿತ ಅಧಿಕಾರವನ್ನು ಯಾವ ಅರ್ಥವ್ಯಾಪ್ತಿಯೊಳಗೆ ಹೇಗೆ ಚಲಾಯಿಸಬಹುದು ಎಂಬ ಪ್ರಶ್ನೆಯು ಪೂರ್ವ ನಿದರ್ಶನ ರಹಿತ ವಿಷಯವಲ್ಲ. ***ಹರಿಯಾಣ ರಾಜ್ಯ –ವಿರುದ್ಧ– ಭಜನ್‌ಲಾಲ್***[6], ಪ್ರಕರಣದಲ್ಲಿ, 102ನೇ ಕಂಡಿಕೆಯಲ್ಲಿ ಕಾನೂನಿನ ಸಮಸ್ಯೆಗಳನ್ನು ವಿಧಿಸಿರುವುದಿಲ್ಲ. ಈ ಪ್ರಕರಣದ ಸಂಬಂಧಪಟ್ಟ ಸಮಸ್ಯೆಯು ಕ್ರಮ ಸಂಖ್ಯೆ (4)ರಲ್ಲಿದೆ ಮತ್ತು ಅದನ್ನು ಈ ಮುಂದಿನಂತೆ ಓದಲಾಗಿದೆ:

> "(4) ಪ್ರಥಮ ಮಾಹಿತಿ ವರದಿಯಲ್ಲಿನ ಆಪಾದನೆಗಳು ಸಂಜ್ಞೇಯವಾದ ಅಪರಾಧ ರೂಪಿಸದಿದ್ದಲ್ಲಿ, ಆದರೆ ಸಂಜ್ಞೇಯವಲ್ಲದ ಅಪರಾಧ ಮಾತ್ರ ಆಗಿದ್ದಲ್ಲಿ ಸಂಹಿತೆಯ 155(2)ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ದಂಡಾಧಿಕಾರಿಯವರ ಆದೇಶವಿಲ್ಲದೆ ಪೊಲೀಸು ಅಧಿಕಾರಿಯು ಅನುಮತಿಸತಕ್ಕದ್ದಲ್ಲ".
>
> (ಒತ್ತು ನೀಡಲಾಗಿದೆ)

6. (1992) 1 ಎಸ್‌ಸಿಸಿ ಎಸ್‌ಯುಪಿಪಿ 535

17. ಇದು ಸಾರ್ವಜನಿಕ ಹಿತಾಸಕ್ತಿಯನ್ನು ತಳೆಯಬೇಕಾಗಿರುವುದರಿಂದ, ತಿರುಳಿಲ್ಲದಿರುವುದರ ವಿರುದ್ಧ ಖಾತರಿಯಾಗಿರುವುದರಿಂದ ಮತ್ತು ಕಿರುಕುಳಯುಕ್ತ ತನಿಖೆಗಳಾಗಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆಯ 155(2)ನೇ ಪ್ರಕರಣದ ಮೇರೆಗೆ ನೀಡಲಾದ ಶಾಸನಬದ್ಧ ರಕ್ಷಣೆಯನ್ನು ಕಟ್ಟುನಿಟ್ಟಾಗಿ ಅನುಸರಿಸಲೇಬೇಕು.

18. ಪ್ರಸ್ತುತ ಪ್ರಕರಣದಲ್ಲಿ, ಅನುಬಂಧ–ಜೆ ಯಿಂದ ಸ್ಪಷ್ಟವಾಗಿರುವುದರಿಂದ ಸಂಜ್ಞೇಯವಲ್ಲದ ಆರೋಪಿತ ಅಪರಾಧಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ 155(2)ನೇ ಪ್ರಕರಣದ ಮೇರೆಗೆ ಒದಗಿಸಲಾದ ರಕ್ಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪೊಲೀಸರು ದಂಡಾಧಿಕಾರಿಯವರ ಬಳಿಗೆ 3ನೇ ಸಂಖ್ಯೆಯ ಎದುರುದಾರರನ್ನು ಕಳುಹಿಸಬೇಕು.

ಪರಿಣಾಮವಾಗಿ, ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತು ಪ್ರಶ್ನಿತ ಹಿಂಬರಹ, ದೋಷಾರೋಪ ಪಟ್ಟಿ ಮತ್ತು ಅನುಕ್ರಮವಾಗಿ ಅನುಬಂಧ–ಎಚ್, ಜೆ ಮತ್ತು ಕೆ ಅನುಬಂಧದ ಪ್ರಕಾರ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಆದೇಶವನ್ನು ರದ್ದುಗೊಳಿಸಲಾಗಿದೆ.

ಆದಾಗ್ಯೂ, 3ನೇ ಸಂಖ್ಯೆಯ ಎದುರುದಾರನು ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಯವರ ಮುಂದೆ ದೂರನ್ನು ಸಲ್ಲಿಸಲು ಮುಕ್ತವಾಗಿರುವನೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ ಮತ್ತು ಕಾನೂನಿನಲ್ಲಿ ಅವನಿಗೆ ಮುಕ್ತವಾಗಿರುವ ಪರಿಹಾರವನ್ನು ಕೋರಬಹುದಾಗಿದೆ.

ಈ ನ್ಯಾಯಾಲಯದ ರಿಜಿಸ್ಟ್ರಿಗೆ, ಕರ್ನಾಟಕದಲ್ಲಿರುವ ಮಹಾನಿರ್ದೇಶಕರು ಮತ್ತು ಪೊಲೀಸು ಮಹಾ ನಿರೀಕ್ಷಕರಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ನಿರ್ದೇಶಿಸಲಾಗಿದ್ದು ಇವರು ಠಾಣಾಧಿಕಾರಿಯವರ ಮಾರ್ಗಸೂಚಿಗಾಗಿ ಕರ್ನಾಟಕ ಪೊಲೀಸು ಜಾಲತಾಣದಲ್ಲಿ ಇದನ್ನು ಹಾಕತಕ್ಕದ್ದು.